ಎಲ್ಲ ಕಡೆಗಳಿಂದ ಶ್ರೀಮಂತರು ಅಲ್ಲಿಗೆ ಮೋಜು ಮಾಡಲು ಬರುತ್ತಾರೆ. ಇಡೀ ಅಮೆರಿಕದಲ್ಲಿ ಲಾಸ್ ವೆಗಾಸ್ ಟೂರಿಸಂಗೆ ಹೆಸರುವಾಸಿ. ಅದೊಂದು ಜಗತ್ತಿನ ಅತಿ ದೊಡ್ಡ ಮನೋರಂಜನೆಯ ಕೇಂದ್ರ. ಜಗತ್ತಿನ ದೊಡ್ಡ ಹೋಟೆಲ್‌ಗಳು, ರೆಸಾರ್ಟ್‌ಗಳು, ಕ್ಯಾಸಿನೊಗಳು ಲಾಸ್ ವೆಗಾಸ್‌ನಲ್ಲಿವೆ. ಸುಮಾರು ನಾಲ್ಕೂವರೆ ಕಿಲೋಮೀಟರ್ ಸ್ಟ್ರೆಚ್‌ನಲ್ಲಿ ನಿಯಾನ್ ದೀಪಗಳು ಝಗಮಗಿಸುತ್ತಿರುತ್ತವೆ. ಇದರಿಂದಾಗಿ ಅದಕ್ಕೆ ಸಿಟಿ ಆಫ್ ಲೈಟ್ಸ್ ಎಂಬ ಹೆಸರೂ ಇದೆ. ಇಟ್ಸ್ ಅನ್‌ಅಲ್ಟಿಮೇಟ್ ಗ್ಯಾಂಬ್ಲಿಂಗ್ ಸೆಂಟರ್. ಜಗತ್ತಿನಾದ್ಯಂತ ಅನೇಕ ಶ್ರೀಮಂತರು ಹಣವನ್ನು ಕಳೆದುಕೊಳ್ಳಲೆಂದೇ ಅಲ್ಲಿಗೆ ಬರುತ್ತಾರೆ! ಗ್ಯಾಂಬ್ಲಿಂಗ್ ಸೆಂಟರ್ ಆಫ್ ದಿ ವರ್ಲ್ಡ್ ಎಂದು ಕರೆಯಲಾಗುತ್ತದೆ. ಅದನ್ನು ಒಂದಾನೊಂದು ಕಾಲದಲ್ಲಿ **sin city** ಎಂತಲೂ ಕರೆಯಲಾಗುತ್ತಿತ್ತು. ಈಗಲೂ ಆ ಹೆಸರು ಆ ನಗರಕ್ಕೆ ಅಂಟಿಕೊಂಡಿದೆ. ಜೂಜು, ವೇಶ್ಯಾವಾಟಿಕೆ ಮತ್ತಿತರ ಅನೇಕ ಅನೈತಿಕ ಚಟುವಟಿಕೆಗಳಿಂದಾಗಿ ಮೋಸ, ಅಪರಾಧಗಳು ಸಹಜವಾಗಿ ಜಾಸ್ತಿಯೇ ಇರುತ್ತವೆ. ಸೆಕ್ಸ್ ಕ್ಲಬ್‌ಗಳಲ್ಲಿ ಲೈವ್ ಸೆಕ್ಸ್, ಓಪನ್ ಸೆಕ್ಸ್ ಪ್ರೋಗ್ರಾಮ್ಸ್ ಸಾಮಾನ್ಯವಾಗಿರುತ್ತವೆ. ಅವೆಲ್ಲ ಲೀಗಲೈಸ್ಡ್ ಕೂಡ. ವೇಶ್ಯಾವಾಟಿಕೆಯನ್ನು ನಿಷೇಧಿಸಲಾಗಿದೆ. ಆದರೂ ಕದ್ದು ಮುಚ್ಚಿ ವೇಶ್ಯಾವಾಟಿಕೆ ನಡೆಯುತ್ತಲೇ ಇರುತ್ತದೆ.

ಭೌಗೋಳಿಕವಾಗಿಯೂ ಲಾಸ್ ವೆಗಾಸ್ ಬಹಳ ವಿಶಿಷ್ಟವಾಗಿದೆ. ಜಗತ್ತಿನ ಅತ್ಯಂತ ದೊಡ್ಡ ಮರುಭೂಮಿಯ ಕಣಿವೆಯಲ್ಲಿ ಲಾಸ್ ವೆಗಾಸ್ ಸೃಷ್ಟಿಯಾಗಿದೆ. ಅಮೆರಿಕದ ಆಟದ ಮೈದಾನವೆಂದೂ ಲಾಸ್ ವೆಗಾಸ್‌ಗೆ ಹೆಸರಿದೆ. ಅದೊಂದು ಮರುಭೂಮಿಯಿಂದ ಹುಟ್ಟಿದ ಸ್ವರ್ಗ. ಇದೆಲ್ಲಾ ನನಗೆ ತಿಳಿದಿದ್ದು ನನ್ನ ಕ್ಲೋಸ್ ಫ್ರೆಂಡ್ ಮೈಥಿಲಿಯಿಂದ. ಮೈಥಿಲಿ ಕಾಲೇಜಿನಲ್ಲಿ ನನಗೆ ಎರಡು ವರ್ಷ ಸೀನಿಯರ್ ಆಗಿದ್ದವಳು. ಸ್ಪೋರ್ಟ್ಸ್, ಕಲ್ಚರಲ್ ಆಕ್ಟಿವಿಟೀಸ್‌ನಲ್ಲಿ ಸದಾ ಅವಳ ಹೆಸರು ಮುಂದಿರುತ್ತಿತ್ತು. ನಾನೂ ಬ್ಯಾಸ್ಕೆಟ್‌ಬಾಲ್ ಆಟವಾಡುತ್ತಿದ್ದೆ. ನಾವು ಆಪೋಸಿಟ್ ಟೀಮುಗಳಲ್ಲಿದ್ದೆವು. ಒಮ್ಮೆ ಮ್ಯಾಚ್ ಆಡುವಾಗ ಡೈವ್ ಮಾಡಲು ಹೋಗಿ ಸ್ಲಿಪ್ ಆಗಿ ಬಿದ್ದು ಪ್ರಜ್ಞೆಯನ್ನು ಕಳೆದುಕೊಂಡಿದ್ದೆ. ಒಂದು ಗಂಟೆಯ ನಂತರ ಪ್ರಜ್ಞೆ ಬಂದಾಗ ನಾನು ಕಾಲೇಜು ಹತ್ತಿರದ ಆಸ್ಪತ್ರೆಯ ಬೆಡ್‌ನಲ್ಲಿದ್ದೆ. ಅಪ್ಪ, ಅಮ್ಮ, ಪ್ರಿನ್ಸಿಪಾಲ್, ಗೆಳತಿಯರು ತುಂಬಿಹೋಗಿದ್ದರು. ನಾನು ಬಿದ್ದ ತಕ್ಷಣ ಮೈಥಿಲಿ ನನ್ನ ಬಾಯಿಗೆ ಬಾಯಿಟ್ಟು ಊದಿ **cpr** ಮಾಡಿ ರೆಸ್ಪಿರೇಶನ್ ರೀಗೈನ್ ಮಾಡಿಸಿದ್ದಳಲ್ಲದೆ, ನನ್ನನ್ನು ಭುಜದ ಮೇಲೆ ಹಾಕಿಕೊಂಡು ಆಸ್ಪತ್ರೆಗೆ ಮೂರು ನಿಮಿಷದಲ್ಲಿ ಬಂದಿದ್ದಳಂತೆ. ಇನ್ನು ಹತ್ತು ನಿಮಿಷ ಲೇಟಾಗಿದ್ದರೆ ನಾನು ಬದುಕುವುದು ಕಷ್ಟಸಾಧ್ಯವಾಗಿತ್ತಂತೆ. ಅಪ್ಪ, ಅಮ್ಮನೊಂದಿಗೆ ಇಡೀ ಕಾಲೇಜು ಮೈಥಿಲಿಯನ್ನು ಕೊಂಡಾಡಿತ್ತು.

ಮೈಥಿಲಿಯ ಅಪ್ಪನದು ಮಾತುಂಗದಲ್ಲಿ ಒಂದು ಸಣ್ಣ ಟ್ರಾವೆಲ್ ಏಜೆನ್ಸಿ ಇತ್ತು. ಅದರಿಂದ ಬರುತ್ತಿದ್ದ ಆದಾಯ ಹೊಟ್ಟೆ ಬಟ್ಟೆಗೂ ಸಾಕಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ಅಪ್ಪ ಪ್ರವಾಸೋದ್ಯಮ ಇಲಾಖೆಯ ಕಮಿಷನರ್ ಆಗಿದ್ದರು. ಅಪ್ಪ ಅವರಿಗೆ ದೊಡ್ಡ ಮೊತ್ತದ ಸಬ್ಸಿಡಿ ಲೋನ್ ಕೊಡಿಸಿ ಸಹಾಯ ಮಾಡಿದ್ದರು. ಒಂದೇ ವರ್ಷದಲ್ಲಿ ಅವರ ಬಿಸಿನೆಸ್ ದೊಡ್ಡದಾಗಿ ಬೆಳೆದು ಯೂರೋಪ್, ಅಮೆರಿಕಗಳಿಗೆ ಟೂರ್ ಕಂಡಕ್ಟ್ ಮಾಡುವ ಮಟ್ಟಕ್ಕೆ ಬೆಳೆದರು. ಮುಂಬಯಿಯಿಂದ ಲಾಸ್ ವೆಗಾಸ್‌ಗೆ ಮತ್ತು ಅಲ್ಲಿಂದ ಮುಂಬಯಿಗೆ ರೆಗ್ಯುಲರ್ ಟ್ರಾವೆಲ್ ಟ್ರಿಪ್‌ಗಳನ್ನು ನಡೆಸುವಾಗ ಲಾಸ್ ವೆಗಾಸ್‌ನ ಪ್ರಮುಖ ಟ್ರಾವೆಲ್ ಏಜೆಂಟ್ ಮತ್ತು ಹೋಟೆಲ್ ಬಿಸಿನೆಸ್ ಮ್ಯಾಗ್ನೆಟ್ ಲೆವಿನ್ಸ್ ಪರಿಚಯವಾಗಿ ಅವನೂ ಮುಂಬಯಿಗೆ ಬಂದು ಹೋಗುತ್ತಿದ್ದನಂತೆ. ಈ ಸಂದರ್ಭದಲ್ಲಿ ಮೈಥಿಲಿಗೆ ಲೆವಿನ್ಸ್ ಪರಿಚಯವಾಗಿ ಅದು ಸ್ನೇಹಕ್ಕೂ, ಪ್ರೀತಿಗೂ ತಿರುಗಿ ಮದುವೆಯೂ ಆಗಿಬಿಟ್ಟರು. ಮೈಥಿಲಿಯನ್ನು ಮದುವೆಯಾದ ಮೇಲೆ ಲೆವಿನ್ಸ್‌ನ ಅದೃಷ್ಟ ಖುಲಾಯಿಸಿತಂತೆ. ಲಾಸ್ ವೆಗಾಸಿನ ಕೆಲವೇ ನಂಬರ್ ಒನ್ ಬಿಸಿನೆಸ್‌ಮನ್‌ಗಳಲ್ಲಿ ಲೆವಿನ್ಸ್ ಕೂಡಾ ಒಬ್ಬನಾಗಿಬಿಟ್ಟನಂತೆ. ಬಿಸಿನೆಸ್ ಒತ್ತಡದಿಂದಾಗಿ ಮೈಥಿಲಿ ನಾಲ್ಕು ವರ್ಷಗಳ ಹಿಂದೆ ಹೋದವಳು ಒಮ್ಮೆಯೂ ಮುಂಬಯಿಗೆ ಬರಲಿಲ್ಲ. ಈಗ ಒಂದು ವರ್ಷದ ಮಗುವಿನ ತಾಯಿ. ವಾರಕ್ಕೊಮ್ಮೆಯಾದರೂ ನನಗೆ ಫೋನ್ ಮಾಡುತ್ತಿರುತ್ತಾಳೆ. ಲಾಸ್ ವೆಗಾಸ್‌ಗೆ ನನ್ನನ್ನು ಮೂರು ವರ್ಷಗಳಿಂದಲೂ ಕರೆಯುತ್ತಲೇ ಇದ್ದಾಳೆ. ಮೈಥಿಲಿ ಮದುವೆಗೆ ಮುಂಚೆ ಲೆವಿನ್ಸ್ ಬಗ್ಗೆ ಮೊದಲು ತಿಳಿಸಿ, ಪರಿಚಯ ಮಾಡಿಸಿ ಅಭಿಪ್ರಾಯ ಕೇಳಿದ್ದೇ ನನ್ನನ್ನು. ಈಗ ಸಂದರ್ಭ ಒದಗಿ ಬಂತು ನೋಡು. ನಾನು ಮದುವೆಯಾಗಲಿರುವ ಹುಡುಗನನ್ನು ಅವಳಿಗೆ ತೋರಿಸಿ ನಾನೂ ಅವಳ ಅಭಿಪ್ರಾಯ ಕೇಳಬೇಕಲ್ಲ. ನನಗಿಂತ ಸೀನಿಯರ್ ಆಗಿದ್ದರೂ, ಮಗು ಆಗಿದ್ದರೂ ಮೈಥಿಲಿ ಈಗಲೂ ರತಿಯಂತೆ ಕಂಗೊಳಿಸುತ್ತಾಳೆ. ಶಿ ಲುಕ್ಸ್ ವೆರಿ ಸೆಕ್ಸಿ. ನೀನು ನೋಡಿದ್ರೆ ಫಿದಾ ಆಗ್ಬಿಡ್ತೀಯ. ಅಂದಹಾಗೆ ಲಾಸ್ ವೆಗಾಸ್‌ನ ಈ ಟ್ರಿಪ್ಪನ್ನು ಸಂಪೂರ್ಣವಾಗಿ ಅರೇಂಜ್ ಮಾಡಿರೋದು ಮೈಥಿಲಿಯೇ. ನಾನು ಅಪ್ಪ ಮಾಡಿದ್ದಾಗಿ ಸುಳ್ಳು ಹೇಳಿದ್ದೆ' ಸುದೀರ್ಘವಾಗಿ ಅವನ ಪ್ರಶ್ನೆಗೆ ಉತ್ತರಿಸಿದ್ದಳು ಪೂರ್ವಿಕಾ. ಆಸ್ಕರ್ ವೈಲ್ಡನಿಗೆ ಒಂದು ಸಿನಿಮಾ ನೋಡಿದಷ್ಟು ಫೀಲ್ ಆಗಿತ್ತು.

ಲಾಸ್ ವೆಗಾಸ್‌ನ ಹ್ಯಾರಿ ರೀಡ್ ಏರ್‌ಪೋರ್ಟಿನಲ್ಲಿ ಇಳಿದಾಗ ಅವರನ್ನು ಬರಮಾಡಿಕೊಳ್ಳಲು ಮೈಥಿಲಿ ಮತ್ತು ಲೆವಿನ್ಸ್ ಇಬ್ಬರೂ ಬಂದಿದ್ದರು. ಆಸ್ಕರ್ ವೈಲ್ಡ್ ಮತ್ತು ಪೂರ್ವಿಕಾರನ್ನು ಬಿಗಿಯಾಗಿ ಆಲಿಂಗಿಸಿಕೊಂಡು, ಕೆನ್ನೆಗೆ ಚುಂಬಿಸಿ ಸ್ವಾಗತಿಸಿದ್ದರು. ಮೈಥಿಲಿ ಕ್ಷಣ ಆಸ್ಕರ್ ವೈಲ್ಡನಿಗೆ ಥೇಟ್ ಅಂಜಲಿ ದೇಸಾಯಿಯಂತೆ ಕಂಡಿದ್ದಳು. ಏರ್‌ಪೋರ್ಟ್ ದಟ್ಟವಾದ ವಿಮಾನ ಮತ್ತು ಜನಸಂದಣಿಯಿಂದ ತುಂಬಿತ್ತು. 'ಒಂದು ವರ್ಷದಲ್ಲಿ ಈ ವಿಮಾನ ನಿಲ್ದಾಣಕ್ಕೆ ಆಗಮಿಸುವ ಮತ್ತು ನಿರ್ಗಮಿಸುವವರ ಸಂಖ್ಯೆ ಐವತ್ತೆಂಟು ಮಿಲಿಯನ್. ಈ ಏರ್‌ಪೋರ್ಟ್ ವಿಸ್ತೀರ್ಣ ಎರಡು ಸಾವಿರದ ಎಂಟುನೂರು ಎಕರೆಯಷ್ಟು' ಎಂದು ಲೆವಿನ್ಸ್ ಏರ್‌ಪೋರ್ಟಿನ ಮಹತ್ವವನ್ನು ತಿಳಿಸಿದ್ದ. ರಾತ್ರಿ ಒಂಬತ್ತು ಗಂಟೆಯಾದ್ದರಿಂದ ಲಾಸ್ ವೆಗಾಸ್ ನಿಯಾನ್ ದೀಪಗಳಲ್ಲಿ ಮಿಂದು ಝಗಮಗಿಸುತ್ತಿತ್ತು. ಇಪ್ಪತ್ತಮೂರು ಗಂಟೆಗಳ ದೀರ್ಘ ಪ್ರಯಾಣದಿಂದಾಗಿಯೂ, **jet lag** ಪರಿಣಾಮದಿಂದಾಗಿಯೂ ಮತ್ತು ಪ್ರಯಾಣದಲ್ಲಿ ಸರಿಯಾಗಿ ನಿದ್ದೆ ಮಾಡದ ಕಾರಣದಿಂದಾಗಿಯೂ ಆಸ್ಕರ್ ವೈಲ್ಡ್ ಆಯಾಸ ಮತ್ತು ತಲೆನೋವುಗಳಿಂದ ಬಳಲುತ್ತಿದ್ದ. ಅದೇ ಪರಿಸ್ಥಿತಿ ಪೂರ್ವಿಕಾಳದೂ ಆಗಿತ್ತು.

ಏಳು ಕೊಠಡಿಗಳ ಹೊಸದಾದ ಭವ್ಯವಾದ ಮನೆ. ಮನೆಯಲ್ಲಿ ಅಡುಗೆಯಿಂದ ಹಿಡಿದು ಎಲ್ಲದಕ್ಕೂ ಕೆಲಸಗಾರರಿದ್ದರು. ಮಗುವನ್ನು ನೋಡಿಕೊಳ್ಳಲು ಸಹ ಇಬ್ಬರು ನರ್ಸ್‌ಗಳಿದ್ದರು. 'ಮೈಥಿಲಿ, ನಂಬರ್ ಏಳು ನನ್ನ ಅದೃಷ್ಟದ ಸಂಖ್ಯೆ, ಹಾಗಾಗಿ ಏಳು ಕೊಠಡಿಗಳ ಮನೆಯನ್ನು ಇತ್ತೀಚೆಗೆ ಕಟ್ಟಿಸಿಕೊಂಡೆವು. ನಮ್ಮ ಕಾರುಗಳ ಮತ್ತು ಟ್ರಾವೆಲ್ಸ್‌ನ ಎಲ್ಲಾ ವೆಹಿಕಲ್‌ಗಳ ನಂಬರ್ ಪ್ಲೇಟ್ ಸಂಖ್ಯೆಗಳು ಏಳನ್ನೇ ಒಳಗೊಂಡಿರುತ್ತವೆ. ಅಲ್ಲದೆ ನಮ್ಮ ಎಲ್ಲಾ ಬಿಸಿನೆಸ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲೂ ನಂಬರ್ ಸೆವೆನ್‌ಗೆ ಪ್ರಾಮಿನೆನ್ಸ್ ಕೊಟ್ಟಿದ್ದೇವೆ. ಅದಕ್ಕೆ ಲೆವಿನ್ಸ್ ಲಾಸ್ ವೆಗಾಸ್‌ನಲ್ಲಿ ಜೇಮ್ಸ್ ಬಾಂಡ್ ಎಂದೇ ಹೆಸರಾಗಿದ್ದಾನೆ. ಕಾಸಿನೊ ರೊಯಾಲ್, ಕ್ವಾಂಟಮ್ ಸೋಲೇಸ್, ಸ್ಕೈಫಾಲ್, ನೋ ಟೈಮ್ ಟು ಡೈ ಮುಂತಾದ ಜೇಮ್ಸ್ ಬಾಂಡ್ ಸಿನಿಮಾಗಳಲ್ಲಿ ನಟಿಸಿರುವ ನಟ ಡೇನಿಯಲ್ ಕ್ರೇಗ್ ಆರು ತಿಂಗಳ ಹಿಂದೆ ಲಾಸ್ ವೆಗಾಸ್‌ಗೆ ಬಂದಿದ್ದಾಗ ನಮ್ಮ ರಾಯಲ್ ಪ್ಯಾರಡೈಸ್ ರೆಸಾರ್ಟ್‌ನಲ್ಲೇ ಉಳಿದುಕೊಂಡಿದ್ದುದು. ನಮ್ಮ ಆತಿಥ್ಯಕ್ಕೆ ಮಾರು ಹೋಗಿ ಎರಡು ಸಾರಿ ನನ್ನನ್ನು ಹಗ್ ಮಾಡಿಕೊಂಡು ಲಾಂಗ್ ಕಿಸ್ ಕೊಟ್ಟಿದ್ದ. ಆ ಫೋಟೊಗಳನ್ನು ನಮ್ಮ ರೆಸಾರ್ಟ್, ಹೋಟೆಲ್, ಕ್ಯಾಸಿನೊ, ಟ್ರಾವೆಲ್ಸ್ ಆಫೀಸುಗಳಲ್ಲಿ ಡಿಸ್‌ಪ್ಲೇ ಮಾಡಿದ್ದೇವೆ. ನೋಡಿದವರೆಲ್ಲ ನನ್ನ ಅದೃಷ್ಟವನ್ನು ಕೊಂಡಾಡುತ್ತಾರೆ. ಅದು ನನಗೊಂದು ದೊಡ್ಡ ಪ್ರತಿಷ್ಠೆ ಕೂಡ' ಎಂದು ಮೈಥಿಲಿ ಎಗ್ಸೈಟ್ ಆಗಿ ಮಾತನಾಡಿದ್ದಳು.

ಅಂದು ರಾತ್ರಿಯ ಊಟಕ್ಕೆ ಅಚ್ಚುಕಟ್ಟಾಗಿ ಮುಂಬಯಿಯ ಸಾಮಾನ್ಯ ಡಿಶ್‌ಗಳಾದ ಪೂರಿ–ಆಲೂಬಾಜಿ, ಅನ್ನ ಸಾಂಬಾರ್, ಪಾವ್ ಬಾಜಿ, ಮೊಸರು ರೆಡಿ ಮಾಡಿಸಿದ್ದಳು ಮೈಥಿಲಿ. ಆಸ್ಕರ್ ವೈಲ್ಡನಿಗೆ ವಿಮಾನದ ಊಟ ಹಿಡಿಸದ ಕಾರಣ ಸರಿಯಾಗಿ ಆಹಾರ ಸೇವಿಸಿರಲಿಲ್ಲ. ಹಾಗಾಗಿ ಈಗ ತೃಪ್ತಿಯಿಂದ ಹೊಟ್ಟೆ ತುಂಬಾ ಊಟ ಮಾಡಿದ್ದ. ಊಟ ಮಾಡುತ್ತಿರುವಾಗಲೇ ಮಂಪರು ಕವಿದು ಬೇಗನೆ ನಿದ್ದೆಗೆ ಜಾರಿದ್ದ. ಯಾರೋ ಮೆಲ್ಲಗೆ ಅಲುಗಾಡಿಸಿದಂತಾಗಿ ಎಚ್ಚರವಾದಾಗ ಪೂರ್ವಿಕಾ ನಗುತ್ತಾ ನಿಂತಿರುವುದು ಕಾಣಿಸಿತು. ಆಸ್ಕರ್ ವೈಲ್ಡನಿಗೆ ಕ್ಷಣ ತಾನು ಎಲ್ಲಿರುವೆನೆಂಬ ಗೊಂದಲ ಉಂಟಾಗಿ ಪೂರ್ವಿಕಾಳನ್ನು ನೋಡಿದ ಕೂಡಲೇ ಲಾಸ್ ವೆಗಾಸ್‌ನಲ್ಲಿರುವುದು ಅರಿವಿಗೆ ಬಂದಿತ್ತು.

'ಗುಡ್ ಈವ್ನಿಂಗ್ ಡಿಯರ್ ಸೋನಾ, ನಿನ್ನೆ ರಾತ್ರಿ ಹನ್ನೊಂದು ಗಂಟೆಗೆ ಮಲಗಿದವನು